ಸಿನಿಕರಾಗುವುದು ನಮ್ಮ ಆಯ್ಕೆಯಲ್ಲ, ವಾಸ್ತವ ಎನ್ನಿಸುವುದೂ ಇದೆ. ಒಂದೆಡೆ, ದುರ್ದಮ್ಯವಾದ ಆಮಿಷಗಳು ಮತ್ತೊಂದೆಡೆ ಕೊನೆಯಿಲ್ಲದ ಕ್ರೌರ್ಯ ಈ ಎರಡೂ ಸೇರಿ ನಮ್ಮ ಕಾಲವನ್ನು ಬೆಂಕಿಯ ಕೊಂಡವನ್ನಾಗಿ ಮಾಡಿಬಿಟ್ಟಿವೆ ಅನ್ನಿಸುತ್ತದೆ. ಆಮಿಷಗಳ ನಡುವಿನ ಆಯ್ಕೆಯಾದರೂ ನಮ್ಮನ್ನು ಆರ್ದ್ರಗೊಳಿಸಬಲ್ಲ, ಮನುಷ್ಯತ್ವದ ಆಯ್ಕೆಗಳಾಗಿರುವುದಿಲ್ಲ. ನಮ್ಮನ್ನು ಇನ್ನಷ್ಟು ಮತ್ತಷ್ಟು ರೂಕ್ಷವಾಗಿಸುವ ಆಯ್ಕೆಗಳೇ.

ಅತಿ ಎನ್ನುವುದು ಅದರ ಶಕ್ತಿ ಮತ್ತು ವಿಕಾರಗಳೆರಡರಲ್ಲೂ ನಮ್ಮನ್ನು ಆವರಿಸಿಕೊಳ್ಳುತ್ತಿದೆ. ಊಹಾತೀತವಾದ ತಂತ್ರಜ್ಞಾನ, ಮಿತಿಯೇ ಇಲ್ಲದ ಅವುಗಳ ಮೇಲಿನ ಅವಲಂಬನೆಯ ಎದುರಿಗೆ ನಾವು ದಿಕ್ಕೆಟ್ಟು ದೇಸಿಗರಾಗಿರುವಂತೆ ಭಾಸವಾಗುತ್ತದೆ.

ಕಂಗೊಳಿಸುವ ಕೆಂಪು ಮುಂದೆ

ಕಂಗೆಡಿಸುವ ಮಂಜು ಹಿಂದೆ ಎನ್ನುವ ನರಸಿಂಹಸ್ವಾಮಿಯವರ ಮಾತು ನಮ್ಮ ಸಮಕಾಲೀನ ಜಗತ್ತಿನ ಸ್ಥಿತಿಯನ್ನೇ ಹೇಳುತ್ತಿರುವಂತಿದೆ. ಯಾವ ವಿಷಯವನ್ನು ಕುರಿತ ಮಾಹಿತಿಯೂ ನಮ್ಮ ಬೆರಳ ತುದಿಯಲ್ಲೇ ಇದೆ. ಆದರೆ ಜ್ಞಾನವಾಗಿಯಲ್ಲ, ಕೇವಲ ಮಾಹಿತಿಯಾಗಿ, ಹುಡುಕಾಟದ ತುದಿಯಲ್ಲಿ ಸಿಗಬಹುದಾದ ಸಂತೋಷ, ಕಾಯುವಿಕೆಯ ಕೊನೆಯಲ್ಲಿ ಕಾದಿರುವ ಧನ್ಯತೆ ಯಾವುದೂ ಇಲ್ಲದ ಬದುಕು ಎರವಲು ತಂದ ಬದುಕಿನ ಪಳೆಯುಳಿಕೆ.

ನನ್ನನ್ನು ಬಹಳ ಕಾಡುವುದೆಂದರೆ, ಸಣ್ಣಪುಟ್ಟ ಸಂತೋಷಗಳೇ ಬದುಕಿನ ಅಮೂಲ್ಯ ಸಂಗತಿಗಳು ಎನ್ನುವುದರಲ್ಲಿ ನಾವು ನಂಬಿಕೆಯನ್ನು ಕಳೆದುಕೊಳ್ಳುತ್ತಿದ್ದೇವೋ ಎನ್ನುವುದು. ಹುಟ್ಟುವ ಸೂರ್ಯನನ್ನು, ಮೂಡುವ ಚಂದ್ರನನ್ನು ನೋಡದೆ, ಬೀಸುವ ಗಾಳಿಯನ್ನೂ ಸ್ಪರ್ಶಿಸಿಕೊಳ್ಳದೆ ಯಾರದೋ ಬದುಕನ್ನು ನಾವು ಬದುಕುತ್ತಿದ್ದೇವೋ ಏನೋ.

ಮೆಚ್ಚಿಕೊಳ್ಳಬಲ್ಲ, ನಾವು ಈ ಕಾಲದವರೆನ್ನುವ ಹೆಮ್ಮೆಯ ಸಂಗತಿಗಳೂ ಅನೇಕವಿವೆ. ಆದರೆ ಯಾಕೋ ಆತಂಕಗಳನ್ನೇ ಹಂಚಿಕೊಳ್ಳಬೇಕೆನಿಸುತ್ತಿದೆ. ಇದರರ್ಥ ನಿರಾಶಾವಾದವಲ್ಲ. ಸವಾಲುಗಳನ್ನು ಮೀರುವುದು ಹೇಗೆನ್ನುವ ದಾರಿಯ ಹುಡುಕಾಟ. 'ಹೇಳ್ಕೊಳಾಕೊಂದೂರು ತಲೆಮ್ಯಾಲೆ ಒಂದ್ಸೂರು ಮಲಗಾಕೆ ಭೂಮ್ತಾಯ ಮಂಚ' ಎನ್ನುವುದು ಬದುಕಿನ ಸೌಂದರ್ಯವೋ? ನಮ್ಮ ಆಯ್ಕೆಯ ಬದುಕೋ? ಅನಿವಾರ್ಯವಾದಾಗ ನಾವು ಆರಿಸಿಕೊಳ್ಳುವುದೋ? ಈ ಎಲ್ಲವೂ ಒಂದಾದಾಗಲೇ 'ಲೀಲೆಯಲಿ ಯಾವುದೂ ವಿಫಲಮಲ್ಲ' ಎನ್ನುವುದು ನಿಜವಾದೀತೇನೋ.

ಇದನ್ನೇ ಕವಿ ಪುತಿನ ಹೇಳುವುದು:

ನಾನು ನಿಲ್ವುದೊಂದೆ ಚಣಂ
ಸತತಕರ್ಮವೆನ್ನ ಗುಣಂ
ಅದಕೆ, ಕಾಣೆ ಗೋಳನಣಂ
ಹರ್ಷಮೆನಗೆ ಚಿರಂತಣಂ

ಕನ್ನಡದ ಪ್ರಮುಖ ವಿಮರ್ಶಕರು. 'ನಾರಿ ಕೇಳಾ', 'ಸ್ತ್ರೀಮತವನುತ್ತರಿಸಲಾಗದೆ?,' 'ಹುದುಗಲಾರದ ದುಃಖ' ಅವರ ಪುಸ್ತಕಗಳು.